**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ,**
**ಮಡಿಕೇರಿ-ಕೊಡಗು**

**ಎಂ.ವಿ.ಸಿ ಸಂಖ್ಯೆ: 136/2024**

**PW-1**

**ಸಾಕ್ಷಿಯನ್ನು ದಿನಾಂಕ 07-02-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**Witness present stepped in to witness box and filed her affidavit as chief examination and confirms the contents of the affidavit is as per her say and the affidavit is under her signature. Hence, the affidavit is treated as chief examination as PW-1.**

**ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ. ಕೆ.ಎ.ಕೆ.ಆರ್. ವಕೀಲರಿಂದಃ**

1. ನಾನು ನನ್ನ ಮುಖ್ಯವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನ್ನ ನಂಬಿಕೆ ಮತ್ತು ಜ್ಞಾನಕ್ಕೆ ಸಂಬಂಧಪಟ್ಟಂತೆ ನಿಜ ಇರುತ್ತದೆ. ಈ ಕೇಸಿನಲ್ಲಿ ನಾನು ಹಾಜರು ಪಡಿಸಿದ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಬೇಕಾಗಿ ವಿನಂತಿಸುತ್ತೇನೆ. ಸಾಕ್ಷಿ ಹಾಜರು ಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

| | |
|---|---|
| Certified copy of the FIR and Compliant | ನಿಪಿ-1 |
| Certified copy of the Wound certificate | ನಿಪಿ-2 |
| Certified copy of the Charge sheet | ನಿಪಿ-3 |
| Certified copy of the statement of petitioner dated 11-04-2024 | ನಿಪಿ-4 |
| Certified copy of the Mahazar along with sketch | ನಿಪಿ-5 |

| | |
|---|---|
| Certified copy of the IMV report | ನಿಪಿ-6 |
| Certified copy of the entire order sheet in Crime No. 36/2024 on the file of Prl. Civil Judge and JMFC, Somwarpet | ನಿಪಿ-7 |
| Original Medical bills (13 in Nos.) | ನಿಪಿ-8 |
| Original Discharge summary | ನಿಪಿ-9 |
| Original X-rays (4 in Nos.) | ನಿಪಿ-10 |
| Original CT scan films (2 in Nos.) | ನಿಪಿ-11 |

ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

**<u>ಪಾಟೀಸವಾಲು-1 ನೇ ಎದುರುದಾರರ ಪರ ಶ್ರೀ ಇ.ಎ.ಟಿ., ವಕೀಲರಿಂದಃ</u>**

2. ನಾನು ಈಗಲೂ ಸಹ ಕುಶಾಲನಗರದ ಜಂಗಲ್ ಕ್ಯಾಂಪ್ ಲಾಡ್ಜ್ ರೆಸಾರ್ಟ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಈ ಹಿಂದೆ ರೆಸಾರ್ಟ್ ನಲ್ಲಿ ಕಿಚನ್ ನಲ್ಲಿ ಕೆಲಸ ಮಾಡುತ್ತಿದ್ದು, ನನ್ನ ಕೆಲಸದ ಅವಧಿ ಬೆಳಗ್ಗೆ 7.00 ರಿಂದ ಮಧ್ಯಾಹ್ನ 2.00 ಗಂಟೆ ಮತ್ತು ಸಂಜೆ 4.00 ಗಂಟೆಯಿಂದ ರಾತ್ರಿ 10.00 ಗಂಟೆ. ದಿಃ 17-03-2024 ರಂದು ನಾನು ಎಂದಿನಂತೆ ಮನೆಯಿಂದ ಸಂಜೆ 4.30 ಸಮಯಕ್ಕೆ ಹೋಗುವಾಗ ನನಗೆ 1 ನೇ ಎದುರುದಾರರಿಗೆ ಸಂಬಂಧಿಸಿದ ವಾಹನದಿಂದ ಅಪಘಾತವಾಗಿರುತ್ತದೆ. ಅಪಘಾತವಾಗುವ ಮುಂಚೆ ಕಾರು ಮೊದಲು ಕಾಂಪೌಂಡಿನ ಗೇಟಿಗೆ ಡಿಕ್ಕಿ ಪಡಿಸಿ ತದನಂತರ ನಮಗೆ ಅಪಘಾತ ಮಾಡಿದ್ದು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ, ಅಪಘಾತವಾದ ನಂತರ ನಾನು ಪ್ರಜ್ಞೆ ತಪ್ಪಿದ್ದೆ ಎನ್ನುತ್ತಾರೆ.

ಅಪಘಾತವನ್ನು ಎಷ್ಟು ದೂರದಿಂದ ನೋಡಿರುತ್ತೀರಿ ಎಂದರೆ ಸಾಕ್ಷಿಯು ಸ್ವಲ್ಪ ದೂರ ಎನ್ನುತ್ತಾರೆ. ಅಪಘಾತ ಪಡಿಸಿದ ಕಾರಿನಲ್ಲಿ ಎಷ್ಟು ಜನ ಇದ್ದರು, ಯಾರು ಚಾಲನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಕುಶಾಲನಗರದ ಜಂಗಲ್ ಕ್ಯಾಂಪ್ ಲಾಡ್ಜ್ ರೆಸಾರ್ಟ್ ನಲ್ಲಿ ಕರ್ತವ್ಯ ಮಾಡುತ್ತಿದ್ದ ಬಗ್ಗೆ ಮತ್ತು ನನಗೆ ಮಾಸಿಕ ರೂ. 25,000/- ದಷ್ಟು ಆದಾಯ ವಿತ್ತು ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿಸಲು ಯಾವುದೇ ತೊಂದರೆ ಇಲ್ಲ. ನನಗೆ ಅಪಘಾತವಾದ ಬಗ್ಗೆ ಯಾವುದೇ ವಿಮೆಯನ್ನು ಪಡೆದಿರುವುದಿಲ್ಲ. ಅಪಘಾತವಾದ ನಂತರ ನನಗೆ ಚಿಕಿತ್ಸೆಗಾಗಿ ಕುಶಾಲನಗರದ ಜಂಗಲ್ ಕ್ಯಾಂಪ್ ಲಾಡ್ಜ್ ರೆಸಾರ್ಟ್ ನ ಎಂ.ಡಿ ರವರು ಹಣ ನೀಡಿರುತ್ತಾರೆ. ಸದರಿ ಅಪಘಾತವು ನಾನು ಮತ್ತು ಕಾವ್ಯರವರು ರಸ್ತೆಯಲ್ಲಿ ಏಕಏಕಿ ತಿರುವುವನ್ನು ಪಡೆಯಲು ಮುಂದಾದಾಗ ಕಾರಿನ ಚಾಲಕ ನಮಗೆ ಅಪಘಾತ ಪಡಿಸುವುದನ್ನು ತಡೆಯಲು ಹೋದಾಗ ಅಪಘಾತವಾಗಿರುತ್ತದೆಯೇ ವಿನಃ ಚಾಲಕ ಮತ್ತು 1 ನೇ ಎದುರುದಾರರಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ರಸ್ತೆಯಲ್ಲಿ ನಾವು ಎಡಬದಿಯಲ್ಲಿ ಹೋಗುತ್ತಿದ್ದೆವು ಎನ್ನುತ್ತಾರೆ.

3. ಅಪಘಾತವು ನಮ್ಮ ನಿರ್ಲಕ್ಷತೆಯಿಂದಲೇ ಘಟಿಸಿರುತ್ತದೆ ಎಂದರೆ ಸರಿಯಲ್ಲ. ಕಾರಿನ ಚಾಲಕ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನ ಪತಿ ಮತ್ತು ಸದರಿ ಕುಶಾಲನಗರದ ಜಂಗಲ್ ಕ್ಯಾಂಪ್ ಲಾಡ್ಜ್ ರೆಸಾರ್ಟ್ ನವರು ನಮ್ಮನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ನಾನು ಪ್ರಮಾಣ ಪತ್ರದಲ್ಲಿ ಹೇಳಿಕೊಂಡಿರುವ ಸಂಗತಿಗಳು ಸುಳ್ಳು ಮತ್ತು ನನಗೆ ಅಪಘಾತದಿಂದ ಇಷ್ಟು ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗುವ ಮುಂಚೆ ನಾನು ಆರೋಗ್ಯವಾಗಿದ್ದೆ, ಅಪಘಾತವಾದ ನಂತರ ನನಗೆ ದೈನಂದಿನ ಚಟುವಟಿಕೆಗಳನ್ನು ಮಾಡಲಾಗುತ್ತಿಲ್ಲ,

ಎಂದಿನಂತೆ ಕರ್ತವ್ಯವನ್ನು ಮಾಡಲಾಗುತ್ತಿಲ್ಲ ಎನ್ನುತ್ತಾರೆ. ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಕೊಂಡಿರುವಂತೆ ಎರಡೂವರೆ ಲಕ್ಷದಿಂದ ಮೂರುವರೆ ಲಕ್ಷದಷ್ಟು ಹಣ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ-1 ರಿಂದ 11 ರಲ್ಲಿನ ದಾಖಲಾತಿಗಳು ನ್ಯಾಯಾಲಯದಿಂದ ಹೆಚ್ಚಿನ ಪರಿಹಾರ ಮೊತ್ತವನ್ನು ಪಡೆಯಲು ಸೃಷ್ಟಿಸಿಕೊಂಡವು ಎಂದರೆ ಸರಿಯಲ್ಲ. 1 ನೇ ಎದುರುದಾರರು ಅಪಘಾತ ಪಡಿಸಿದ ಕಾರಿನ ಮಾಲಿಕರಾಗಿದ್ದು, ಊರ್ಜಿತ ವಿಮೆ ಮತ್ತು ಆರ್.ಸಿ ಯನ್ನು ಹೊಂದಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಎದುರುದಾರರು ವಾಹನವನ್ನು ಚಲಾಯಿಸಿಲ್ಲ, ಅಪಘಾತ ಪಡಿಸಿಲ್ಲ ಆದ್ದರಿಂದ ಯಾವುದೇ ಪರಿಹಾರ ನೀಡಲು ಬಾಧ್ಯಸ್ತರಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.

**2 ನೇ ಎದುರುದಾರರು ಗೈರು ಹಾಜರಿದ್ದರಿಂದ ಪಾಟೀಸವಾಲಿಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಧೀಶರು,
ಕೊಡಗು-ಮಡಿಕೇರಿ.